# 4

# ನಿರಾಸಕ್ತಿ ತೋರುತ್ತಿದ್ದೇವೆಯೇ?

# (2:1-4)

ಇಬ್ರಿಯ 2:1-4ರಲ್ಲಿ, "ನೇರವಾದ ಉತ್ತೇಜನವನ್ನು ನೀಡಲಾಗಿದೆ" ಸಂಕ್ಷಿಪ್ತವಾಗಿ, "ನಾವು ಕೇಳಿದ ಸಂಗತಿಗಳಿಗೆ *ತಪ್ಪಿ ಹೋದೆವೆಂದು ಭಯಪಡಬೇಕು*" ಎಂದು ನಾನು ತಿಳಿಸುತ್ತೇನೆ!

"ಈ ಕಾರಣದಿಂದ" ಎಂಬ ಮಾತಿನಿಂದ ವ್ಯಾಖ್ಯಾನವು ಆರಂಭಗೊಳ್ಳುತ್ತದೆ. ಪುಸ್ತಕದಲ್ಲಿ ಈಗಾಗಲೇ ಹೇಳಿರುವ ಸಂಗತಿಗೆ ಇದು ಸಂಬಂಧಪಟ್ಟದ್ದಾಗಿದೆ: ಯೇಸು ದೇವರ ಮಗನಾಗಿರುವದರಿಂದ, ಆರಾಧನೆಗೆ ಯೋಗ್ಯನು, ಆತಾ ಸೃಷ್ಟಿಕರ್ತನಾಗಿರುವದರಿಂದ, ಆತನೇ ಎಲ್ಲವನ್ನು ಆಳುತ್ತಿರುವದರಿಂದ, "ನಾವುಗಳು ಕೇಳಿದ ಸಂಗತಿಗೆ ಗಮನ ನೀಡಬೇಕು" (ವಚನ 1). ವಚನ 3ರಲ್ಲಿ, "ಅಲಕ್ಷ್ಯ" ತಪ್ಪಿಸಿಕೊಳ್ಳವದು ಅಂದರೆ, "ಅಸಡ್ಡೆ" ಎಂಬ ಅರ್ಥವಾಗಿವೆ. ನಾವು ದೇವರ ವಾಕ್ಯಗಳನ್ನು ಅಸಡ್ಡೆ ಮಾಡಬಾರದು, ಕ್ರೈಸ್ತತ್ವವನ್ನೂ ಹಾಗೂ ನಮ್ಮ ಆತ್ಮಗಳನ್ನು ನಿರ್ಲಕ್ಷ್ಯ ಮಾಡಬಾರದು.

### ಪಾಪ

ಇಬ್ರಿಯ ಪತ್ರಿಕೆಯ ಪರಿಚಯದ ಪಾಠದಲ್ಲಿ, ಈ ಜನರು ತಮ್ಮ ಕ್ರೈಸ್ತ ಜೀವಿತವನ್ನು ಅಮೋಘವಾಗಿ ಆರಂಭಿಸಿದ್ದರು, ಆದರೆ ಈಗ ಭ್ರಷ್ಟರಾಗಿದ್ದರು. ಕ್ರೈಸ್ತತ್ವವನ್ನು ತೊರೆದು ಹೋಗುವ ಸೂಚನೆಗಳ ದಾಖಲಾತಿ ಇಲ್ಲದಿದ್ದರೂ, ಒಂದಲ್ಲಾ ಒಂದು ದಿನ ಅವರು ಕೋಪಗೊಂಡು ಬಿಟ್ಟುಹೋಗುವ ಸಾಧ್ಯತೆಗಳಿದ್ದವು.[1] ಒಂದು ದೋಣಿಯು ತನ್ನ ಲಂಗರನ್ನು ಕಳೆದುಕೊಂಡು, ಹತೋಟಿ ತಪ್ಪಿಹೊಗುವ ಹಾಗೆ ಅವರ ಜೀವತವು, ದೇವರಿಂದ ದೂರವಾಗುತ್ತಿತ್ತು. ಅನೇಕರು ನಂಬಿಕೆಯನ್ನು ಬಿಟ್ಟುಹೋಗುವದನ್ನು ಹಲವಾರು ವರ್ಷಗಳಿಂದ ನಾನು ನೋಡಿದ್ದೇನೆ.[2] ಕೆಲವರು ಗೊಂದಲಕ್ಕೊಳಗಾಗಿ ಬಿಟ್ಟು ಹೋದರೆ, ಕೆಲವರು ತಮ್ಮ ಅಪನಂಬಿಕೆಯ ನಿಮಿತ್ತ ಬಿಟ್ಟು ಹೋಗಿರುವರು. "ತಪ್ಪಿಸಿಕೊಂಡುಹೋದರು" ಎಂದರೆ ವಚನ 3, ಅವರ ಆತ್ಮಗಳನ್ನು ಸುಭದ್ರಪಡಿವಂಥದ್ದನ್ನು *ತೊರೆದು* ಹೋದರು ಎಂಬ ಅರ್ಥವಾಗಿದೆ.

ಲೂಕ 15ರಲ್ಲಿ, ಕಳೆದು ಹೋದ ಸಂಗತಿಗಳಲ್ಲಿ, ಮೊದಲನೆಯದು ಕಳೆದುಹೋದ ಕುರಿ, ಸಹಜವಾಗಿ ಕುರಿಯು ದ್ವೇಷಿಸುವ ಪ್ರಾಣಿಯಲ್ಲ. ಕುರುಬನಿಗೆ ತೊಂದರೆ ನೀಡುವದಕ್ಕಾಗಿ ಅದು ತಪ್ಪಿಸಿಕೊಂಡು ಹೋಗುವದಿಲ್ಲ. ಅದು ತನ್ನ ತಲೆಯನ್ನು ತಗ್ಗಿಸಿಕೊಂಡು ಹುಲ್ಲಿರುವ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತದೆ. ನಂತರ ಅದರ ತಲೆಯನ್ನು ಎತ್ತಿ ನೋಡುವಾಗ, ಅದು ಹಿಂಡಿನಿಂದ ದೂರವಾಗಿ ಕಳೆದುಹೋಗಿರುತ್ತದೆ!

ಅಲಕ್ಷ್ಯ ಹಾಗೂ ಅಸಡ್ಡೆ ಮನೋಭಾವದ ಕುರಿತು ಅನೇಕ ಉದಾಹರಣೆಗಳನ್ನು ನೀಡಬಹುದು - ಅದರ ಕೆಟ್ಟ ಪರಿಣಾಮಗಳನ್ನು ತಿಳಿಸಬಹುದಾಗಿದೆ.[3] ಸತಿಪತಿಗಳಲ್ಲಿ ಒಬ್ಬರ ತಪ್ಪಿನಿಂದಾಗಿ, ಅವರ ದಾಂಪತ್ಯ ಜೀವನ ನಾಶವಾಗುವ ಸಾಧ್ಯತೆಯಿದೆ. ಸತಿಪತಿಗಳಲ್ಲಿ ಅಪನಂಬಿಗಸ್ತರಾದವರು ತಪ್ಪುಗಳನ್ನು ಮಾಡುವ ಯೋಜನೆಯನ್ನು ಹೊಂದಿರುವದಿಲ್ಲ; ಅವರು ವಾಕ್ಯಕ್ಕೆ ವಿರೋಧವಾದ ಕಾರ್ಯಗಳನ್ನು ಮಾಡಿ ತಪ್ಪಿಹೋಗುವವರಾಗಿರುತ್ತಾರೆ.

ನಂಬಿಕೆಯನ್ನು ತೊರೆದು ಹೋದವರು ಉದ್ದೇಶಪೂರ್ವಕವಾಗಿ ತಪ್ಪೆಸಗದೆ, ನಿರ್ಲಕ್ಷದ ನಿಮಿತ್ತ ಸೋತವರಾಗಿರುತ್ತಾರೆ. ಇವರಲ್ಲಿ ಅನೇಕರು ಆಸಕ್ತಿಯಿಂದಲೇ ಕ್ರೈಸ್ತ ಜೀವಿತವನ್ನು

ಆರಂಭಿಸಿದ್ದರು. ನಂತರದಲ್ಲಿ "ಮೊದಲ ಪ್ರೀತಿಯ" ಕೊರತೆಯಿಂದ ತಪ್ಪಿಹೋದರು (ಪ್ರಕಟನೆ 2:4). ಈ ಹಿಂದೆ ಅಧ್ಯಯನ ಮಾಡಿದಂತೆ, ಈಗ ಮಾಡುತ್ತಿರುವದಿಲ್ಲ. ಮೊದಲಿನಂತೆ ಪ್ರಾರ್ಥಿಸುತ್ತಿರುವದಿಲ್ಲ, ಕರ್ತನ ಸೇವೆಯಲ್ಲಿ ಮೊದಲಿದ್ದ ಆಸಕ್ತಿಯನ್ನು ಕಳಕೊಂಡಿದ್ದಾರೆ. ಅವರು ನಿಧಾನವಾಗಿ ... ನಿಧಾನವಾಗಿ ... ನಿಧಾನವಾಗಿ ... ಹಿಂಜರಿದು ದೇವರಿಂದ ದೂರ ವಾಗಿದ್ದಾರೆ.

## ಪ್ರಾಮುಖ್ಯತೆ

ನಿರ್ಲಕ್ಷದ ದೆಸೆಯಿಂದ ದೇವರಿಂದ ದೂರವಾಗುವದು ಅವಿಧೇಯತೆಗೆ ಸಮಾನ ವಾದದ್ದು, ಅದರ ಅಂತಿಮ ಪರಿಣಾಮ ಒಂದೇ ಆಗಿರುತ್ತದೆ. ಈ ವಿಚಾರದ ಕುರಿತು ಉದಾಹರಣೆಗಳನ್ನು ನೀಡಬಹುದು. ನನ್ನ ಅಕ್ಕನ ಮಗ ಮತ್ತು ಅವನ ಹೆಂಡತಿ ಮಾನಸಿಕ ತೊಂದರೆಯಿಂದ ಆಕೆಯ ಚಿಕ್ಕಮಗಳನ್ನೇ ಹತ್ಯಮಾಡಿದ ಒಬ್ಬಳ ಮನೆಯ ಪಕ್ಕದಲ್ಲಿ ವಾಸವಾಗಿದ್ದರು. ಅದೇ ವರ್ಷದಲ್ಲಿ, ನಮಗೆ ಪರಿಚಯವಿದ್ದ ಒಬ್ಬ ತಾಯಿಯು ನಿದ್ರಿಸುತ್ತಿರುವಾಗ, ಆಕೆಯ ಮಗುವು ನೀರಿನಲ್ಲಿ ಮುಳುಗಿ ಅಸುನೀಗಿತು. ಸೀಮಿತವಿಲ್ಲದ ಬುದ್ಧಿಯ ನಿಮಿತ್ತ ಒಂದು ಘಟನೆ ಸಂಭವಿಸಿದರೆ, ಮತ್ತೊಂದು ಘಟನೆ ಅಲಕ್ಷ್ಯದಿಂದ ಉಂಟಾಯಿತು. ಈ ಎರಡು ಘಟನೆಗಳು ಮರಣದಿಂದಲೇ ಅಂತ್ಯಗೊಂಡವು.

### ಕ್ರಿಸ್ತನ ಮಾತುಗಳನ್ನು ಅಲಕ್ಷ್ಯ ಮಾಡಿದರೆ

*ಸುವಾರ್ತೆಯನ್ನು* ಅಲಕ್ಷ್ಯ ಮಾಡುವದರಿಂದ ಉಂಟಾಗುವ ಪರಿಣಾಮದ ಬಗ್ಗೆ ನಾವು ಒತ್ತಿ ಹೇಳುತ್ತಿದ್ದೇವೆ. ಅದು ಕ್ರಿಸ್ತನ ಮಾತಾಗಿರುವದರಿಂದ, ಆಘಾತವೇ ಆದ್ದರಿಂದ ಬರಹಗಾರನು, "ದೇವದೂತರಿಂದ ಹೇಳಲ್ಪಟ್ಟ ವಾಕ್ಯ" (ವಚನ 2; ಅಪೊಸ್ತಲರ ಕೃತ್ಯಗಳು 7:53ಡ; ಗಲಾತ್ಯ 3:19) (ಹಳೆ ಒಡಂಬಡಿಕೆಯಿಂದ) "ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು" (ವಚನ 3) ಎಂದು ಬರೆದಿರುವನು (ಹೊಸ ಒಡಂಬಡಿಕೆ).

"ದೇವದೂತರ ಮೂಲಕ ಹೇಳಲ್ಪಟ್ಟ ವಾಕ್ಯವು ಸ್ಥಿರವಾಗಿದ್ದು" ಅದನ್ನು ಮೀರಿ ಮಾಡಿದ ಪ್ರತಿಯೊಂದು ತಪ್ಪಿಗೂ ನ್ಯಾಯವಾದ ಪ್ರತಿಫಲ ಉಂಟಾಯಿತು (ವಚನ 2). ಸಬ್ಬತ್ ದಿನದಲ್ಲಿ ಕಟ್ಟಿಗೆಯನ್ನು ಕೂಡಿಸುವವನನ್ನು ಕಲ್ಲಿನಿಂದ ಹೊಡೆದು ಸಾಯಿಸುತ್ತಿದ್ದರು (ಅರಣ್ಯಕಾಂಡ 15:32-36). ಉಜ್ಜನು ಪರಿಶುದ್ಧವಾದ ಮಂಜೂಷವನ್ನು ಮುಟ್ಟಿದಾಗ ಹತನಾದನು (2 ಸಮುವೇಲ 6:3-7). ದೇವದೂತರಿಂದ ಉಂಟಾದ ಈ ಪ್ರಕಟನೆಯು ಇಷ್ಟು ಕ್ರೂರವಾದ ಪ್ರತಿಫಲವನ್ನು ಉಂಟುಮಾಡುವದಾದರೆ "ಕರ್ತನಿಂದ ಹೇಳಲ್ಪಟ್ಟ ಈ ಅತ್ಯಂತ ವಿಶೇಷ ರಕ್ಷಣೆಯನ್ನು[4] ಅಲಕ್ಷ್ಯಮಾಡಿದರೆ," ಅವನ ಪರಿಸ್ಥಿತಿ ಏನಾಗಬಹುದು ಎಂದು ಬರಹಗಾರನು ತಿಳಿಸಿರುವನು (ವಚನ 3)?

### "ಖಾತ್ರಿಯಾದ" ಸುವಾರ್ತೆಯನ್ನು ಅಲಕ್ಷಮಾಡಿದರೆ

ಎರಡನೆಯದಾಗಿ "*ಖಾತ್ರಿಯಾದ* ಸುವಾರ್ತೆಯನ್ನು" ಅಲಕ್ಷ್ಯ ಮಾಡಿದರೆ ದುರಂತ ಸಂಭವಿಸುತ್ತದೆ. ವಚನ 3ರಲ್ಲಿ ಇದನ್ನು ಸ್ಥಿರಪಡಿಸಲಾಗಿದೆ. ವಿಲಿಯಮ್ ಬಾರ್ಕ್ಲೆಯವರು ತಮ್ಮ ಅನುವಾದದಲ್ಲಿ, "ನಾವು ಕೊಂಡು ಕೊಳ್ಳುವ ಸಕಲ ವಸ್ತುಗಳಿಗೂ ಖಾತ್ರಿಯನ್ನು ಕೇಳುತ್ತೇವೆ; ಆದ್ದರಿಂದ ಭರವಸೆ ಉಂಟಾಗುತ್ತದೆ."[5] ಸುವಾರ್ತೆಯನ್ನು ಕರ್ತನೇ ಖಾತ್ರಿ ಪಡಿಸಿರುವದರಿಂದ ನಮ್ಮ ನಿತ್ಯವಾದ ಆತ್ಮವು ಆ ಬೋಧನೆಯಲ್ಲಿ ಭರವಸವಿಡಬಹುದು ಎಂದು ಹೇಳಿರುವರು.

ಸುವಾರ್ತೆಯು ಸತ್ಯವಾದದ್ದು ಎಂದು ತಿಳಿಸಲು ನಮ್ಮ ಪಾಠದಲ್ಲಿ ಮೂರು ಸಾಕ್ಷಿಗಳನ್ನು ನೀಡಲಾಗಿದೆ:

- ಯೇಸು: "ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು" (ವಚನ 3).
- ಅಪೊಸ್ತಲರು ಮತ್ತು ಇತರೆ ಪ್ರೇರಿತರಾದವರು: "ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು" (ವಚನ 3).
- ಮತ್ತು ದೇವರು, ಆತನಿಂದ ಕೇಳಿದವರು[6] ಇದನ್ನು ನಮಗೆ ಸ್ಥಿರಪಡಿಸಿದರು: "ಮತ್ತು ದೇವರು ಅವರ ಕೈಯಿಂದ ಸೂಚಕ ಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿ ಕೊಡುತ್ತಿದ್ದನು" (2:4).[7]

ಕ್ರಿಸ್ತನ ವಾಕ್ಯಗಳನ್ನು ಅಲಕ್ಷ್ಯಮಾಡಿದರೆ ಉಂಟಾಗುವ ಸಂಕಟವು ದೊಡ್ಡದೆ! ಇಂತಹ ಸುಭದ್ರವಾದ ಸುವಾರ್ತೆಯನ್ನು ತೊರೆದರೆ ಕ್ರೈಸ್ತರಿಗೆ ಅದು ದೊಡ್ಡ ದುರಂತವೇ!

## ಪರಿಹಾರ

ಆತನನ್ನು ತೊರೆದು ಹೋಗದಂತೆ ಏನು ಮಾಡಬೇಕು? ಅಲಕ್ಷ್ಯವೆಂಬ ಪಾಪದಿಂದ ಹೇಗೆ ವಿಮೋಚನೆ ಪಡೆಯಬಹುದು? ನಮ್ಮ ಆರಂಭದ ವಾಕ್ಯಗಳ ಕಡೆಗೆ ಹಿಂದಿರುಗಿರಿ: "ನಾವು ಕೇಳಿರುವ ಸಂಗತಿಗಳಿಗೆ ಗಮನ ನೀಡಬೇಕು, ಅದರಿಂದ *ನಾವು ಹಿಂಜರಿದು* ಹೋಗುವದಿಲ್ಲ" (ವಚನ 1; ಒತ್ತಿ ಹೇಳಿದ್ದು ನನ್ನದು). ನೀಲ್ R. ಲೈಟ್‌ಫುಟ್‌ರವರು ಇದನ್ನು:

> ಅವರು ಸಭೆಗೆ ಬಂದಾಗ, ದೇವರ ವಾಕ್ಯವನ್ನು ಆಲಿಸಲು ತುದಿಗಾಲಲ್ಲಿ ನಿಲ್ಲ ಬೇಕು (ಯಾಕೋಬ 2:2). ನಾವುಗಳು ಆರಾಧನೆಗೆ ಬಂದಾಗ, ಮಾನಸಿಕವಾಗಿಯೂ ದೈಹೀಕವಾಗಿಯೂ ಅನೇಕ ಬಾರಿ ಅರ್ಧಮನಸ್ಸಿನವರಾಗಿರುತ್ತೇವೆ. ಆತ್ಮೀಕ ಹಾಗೂ ನಿತ್ಯತ್ವದ ವಿಚಾರಗಳಿಗೆ ಹೆಚ್ಚು ಆಸಕ್ತಿವಳ್ಳವರಾಗಿರಬೇಕು! ಎಂದು ಹೇಳಿರುವರು.[8]

ನಾವು ದೇವರ ವಾಕ್ಯವನ್ನು ಧ್ಯಾನಿಸಬೇಕು. ಅದನ್ನು ಮನನ ಮಾಡಿ, ಪುನರಾವರ್ತನೆ ಮಾಡಿದರೆ ನಾವು ಹಿಂಜರಿದು ಹೋಗುವದಿಲ್ಲ.[9] ಅದನ್ನು ಪ್ರಾಯೋಗಿಕವಾಗಿ ಬಳಸ ಬೇಕು. ದೇವರ ಸಹಾಯವಿಲ್ಲದೆ ನಾವು ಇದನ್ನು ಮಾಡಲು ಅಸಾಧ್ಯ.

ನಮಗೆ ಆತನೇ ಸಹಾಯಕನಾಗಿರುವದರಿಂದ ನಾವು ಕೃತಜ್ಞರಾಗಿರಬೇಕು (1:17, 18; ಹಾಗೆಯೇ 4:14-16; ನೋಡಿರಿ 13:5ಬಿ, 6). ನಾವು ಮಾಡಬೇಕಾದದ್ದನ್ನು ಮಾಡಬೇಕೆಂದು ದೇವರು ಇಚ್ಛಿಸುತ್ತಾನೆ. ನಮ್ಮ ವೈಯಕ್ತಿಕವಾದ ಹೊಣೆಯಿಂದ ತಪ್ಪಿಸಿಕೊಳ್ಳಲಾರೆವು. ನಂಬಿಗಸ್ತರಾಗಿರುವದಕ್ಕೆ, ಆತನ ರಕ್ಷಣೆಯನ್ನು ಅವಲಂಬಿಸಬೇಕು - ಪ್ರಯತ್ನಿಸಬೇಕು!

## ಬೋಧಕರಿಗಾಗಿ ಟಿಪ್ಪಣಿ

2:1ರಲ್ಲಿ, "ತಪ್ಪಿ ಹೋದೆ" ಎನ್ನುವ ಬದಲು, KJVಯಲ್ಲಿ ಜಾರಿ ಹೋಗದಂತೆ ಎಂಬದಾಗಿದೆ. ನನ್ನ ದೇಹದ ತೂಕವನ್ನು ಕಳಕೊಳ್ಳುವಾಗ, ನನ್ನ ಮದುವೆಯ ಉಂಗುರವು ಬೆರಳಿನಿಂದ ಜಾರಿ ಹೋಗುತ್ತದೆ. ನಾನು ಆಸ್ಟ್ರೇಲಿಯದಲ್ಲಿದ್ದಾಗ ಒಂದು ತಿಂಗಳ ಕಾಲದವರೆಗೂ ನನ್ನ ಮದುವೆಯ ಉಂಗುರವನ್ನು ಕಳಕೊಂಡಿದ್ದೆನು. ನಂತರ ಅದನ್ನು ಹಾಲು ಮಾರುವವನು ಹಾಲನ್ನು ಇಡುತ್ತಿದ್ದ ಮರದ ಕೆಳಗೆ ಕಂಡುಕೊಂಡೆನು. ನಾನು ಹಾಲಿನ ಬಾಟಲಿಯನ್ನು ಎತ್ತುವಾಗ ನನ್ನ ಉಂಗುರವು ಜಾರಿ ಬಿದ್ದಿರಬಹುದು. ಅದನ್ನು ನಾನು ಕೋಪದಿಂದ ಬಿಸಾಡಿಲ್ಲವಾದರೂ, ಅದು ನನ್ನ ಬೆರಳಿನಿಂದ ಜಾರಿ ಬಿದ್ದಿತ್ತು.

ಇದೇ ವಿಧವಾಗಿ ಕೆಲವರು ನಂಬಿಕೆಯಿಂದ ಜಾರಿಹೋಗಿ, ಅವರ ಸಮರ್ಪಣೆ, ಹಾಗೂ

ದೇವರ ಸಂಬಂಧದಿಂದ ಜಾರಿಹೋಗಿರುವರು. *ಅಲಕ್ಷ್ಯಮಾಡಿದ* ಸಂದರ್ಭಗಳು ಪುನಃ ಬರಲಾರವು. ಒಂದು ಪುರಾತನ ಹೇಳಿಕೆಯಂತೆ, "ಮೂರು ಸಂಗತಿಗಳು ಹಿಂದಿರುಗುವದಿಲ್ಲ - ಮಾತು, ಬಾಣ, ಕಳೆದು ಹೋದ ಅವಕಾಶ."

---

ಟಿಪ್ಪಣಿಗಳು

[1]ಆತ್ಮೀಕ ನಿರೀಕ್ಷೆಯ ಲಂಗರಿನ ಬಗ್ಗೆ ಮುಂದೆ ನೋಡುತೇವೆ (6:19). [2]"ವಿಶ್ವಾಸ" ಅಂದರೆ ಕ್ರೈಸ್ತ ವಿಧೇಯತೆ (ಅಪೊಸ್ತಲರ ಕೃತ್ಯಗಳು 14:22; 16:5; 1 ಕೊರಿಂಥ 16:13). [3]ಸಮಾಜಕ್ಕೆ ಅನುಗುಣವಾದ ಸಮಯವನ್ನು ಬಳಸಿರಿ. [4]ಯೇಸು ನಮ್ಮ ಹಾಗೆ ಏಕೆ ಆದನು? ಎಂಬ ಪಾಠದಲ್ಲಿ ಅತ್ಯಂತ ವಿಶೇಷ ರಕ್ಷಣೆಯ ಕುರಿತು ನೋಡುತ್ತೇವೆ. [5]William Barclay, *The Letter to the Hebrews*, 3rd ed., rev. and updated, The New Daily Study Bible (Louisville: Westminster John Knox Press, 2002), 24. [6]ಅಪೊಸ್ತಲರಿಂದ ಹಸ್ತವನ್ನಿಡಲ್ಪಟ್ಟವರು (ಅಪೊಸ್ತಲರ ಕೃತ್ಯಗಳು 8:17, 18). [7]ಅದ್ಭುತಗಳು ವಾಕ್ಯವನ್ನು ದೃಢಪಡಿಸಿದವು. ದೃಢಪಟ್ಟ ನಂತರ ಅದರ ಅಗತ್ಯವಿರಲಿಲ್ಲ. [8]Neil R. Lightfoot, ACU extension class on Hebrews taught in Fort Worth, Texas, 14 September 1985. [9]ಜಾರಿಹೋದ ನಿದರ್ಶನವನ್ನು ಬಳಸಬಹುದು.